**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :125 ಫಾ.ಸಾ. : 58**

ಸಾಕ್ಷಿಯ ಹೆಸರು : ದ್ಯಾವಾ ಹನುಮ ನಾಯಕ್

ತಂದೆಯ ಹೆಸರು : ಹನುಮ ನಾಯಕ್

ವಯಸ್ಸು : 75 ವರ್ಷ

ಉದ್ಯೋಗ : ಉದ್ಯೋಗ ಇಲ್ಲ.

ವಾಸ : ಕಾನಗೋಡು, ಸಿದ್ದಾಪುರ.

**ದಿನಾಂಕಃ 07-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಹುಟ್ಟಿದಾಗಿನಿಂದ ವಾಸ ಇದ್ದೆ. ಕಾನಗೋಡದಲ್ಲಿ ನನ್ನ ಸ್ವಂತ ಮನೆ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇದ್ದಾನೆ. ಆರೋಪಿ ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದ. ಆರೋಪಿ ಅಧ್ಯಕ್ಷ ಆಗಿದ್ದ ಅವಧಿಯಲ್ಲಿ ನನ್ನ ಮನೆಗೆ ಶೌಚಾಲಯ ಇರಲಿಲ್ಲ. 2001-02 ರಲ್ಲಿ ಸರ್ಕಾರ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಮ್ಮ ಗ್ರಾಮಕ್ಕೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.20 ಲಕ್ಷ ಅನುದಾನ ನೀಡಿದ್ದರು ಎಂದು ಗೊತ್ತಿಲ್ಲ. ಅದರಲ್ಲಿ 210 ಫಲಾನುಭವಿಗಳು ಆಯ್ಕೆ ಆಗಿದ್ದರು ಎನ್ನುವುದು ಗೊತ್ತಿಲ್ಲ. ಅದರಲ್ಲಿ ನನ್ನ ಹೆಸರು ಇತ್ತು ಎನ್ನುವುದು ಗೊತ್ತಿಲ್ಲ. ನನಗೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.3000/- ಸಹಾಯಧನ ನೀಡಿಲ್ಲ ಮತ್ತು ಶೌಚಾಲಯವನ್ನು ನಿರ್ಮಿಸಿ ಕೊಟ್ಟಿಲ್ಲ. ಆರೋಪಿ ಅವಧಿಯಲ್ಲಿ ಅದನ್ನು ನಿರ್ಮಿಸಿ ಕೊಟ್ಟಿಲ್ಲ ನಾನು 8-9 ವರ್ಷದ ಹಿಂದೆ ಶೌಚಾಲಯ ನಿರ್ಮಿಸಿಕೊಂಡಿದ್ದೇನೆ, ಆಗ ಸರ್ಕಾರದಿಂದ ಸಹಾಯಧನ ಸಿಕ್ಕಿದೆ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀಮತಿ ಎಸ್ ಜಿ ಎನ್ ರವರಿಂದಃ-**

2. 2001-02 ರಲ್ಲಿ ನನಗೆ ಗ್ರಾಮ ಪಂಚಾಯತಿಯಿಂದ ಶೌಚಾಲಯ ಮಂಜೂರು ಆಗಿತ್ತು ಮತ್ತು ಆಗಲೇ ನಾನು ಶೌಚಾಲಯ ನಿರ್ಮಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಶೌಚಾಲಯ ಆಗಲೇ ಪಡೆದುಕೊಂಡಿದ್ದರು ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ